
## ಕಥೋಪದೇಶ



# ಒಳ್ಳೆಯ ನೆರಳಿನ ಸಂನ್ಯಾಸಿ

**ಸಂಗ್ರಹ: ಜಿ.ಎಸ್. ಜಯದೇವ, ಚಾಮರಾಜನಗರ**

ಒಂದು ಕಾಡಿನಲ್ಲಿ ಒಬ್ಬ ತಪಸ್ವಿ ಇದ್ದ. ತಪಸ್ವಿ ಎಂದರೆ ಎಲ್ಲವನ್ನೂ ತ್ಯಾಗ ಮಾಡಿ, ತಪಸ್ಸು ಮಾಡುವ ಋಷಿ ಎಂದರ್ಥ. ಹಿಂದಿನ ಕಾಲದಲ್ಲಿ ಊರುಗಳು ಎಲ್ಲೋ ಕೆಲವು. ಆದರೆ ಕಾಡು ಮಾತ್ರ ಸಾಕಷ್ಟಿತ್ತು. ಚಿಕ್ಕ ಚಿಕ್ಕ ಊರುಗಳ ಪಕ್ಕದಲ್ಲಿ ಕಾಡುಗಳು ಬೆಳೆಯುತ್ತಿದ್ದವು. ಆ ಕಾಡುಗಳಲ್ಲಿ ನಿರ್ಮಲವಾದ ಕೊಳಗಳು, ಫಲಭರಿತವಾದ ಮರಗಳು, ಗೆಡ್ಡೆ ಗೆಣಸುಗಳೆಲ್ಲಾ ಇರುತ್ತಿದ್ದವು. ಋಷಿಗಳು ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದು ಮರದ ಕೆಳಗೆ ಕುಳಿತು ತಪಸ್ಸು ಮಾಡುತ್ತಿದ್ದರು. ಇವರು ಏಕೆ ತಪಸ್ಸು ಮಾಡುತ್ತಿದ್ದರು ನಿಮಗೆ ಗೊತ್ತೆ? ಏಕೆಂದರೆ, ಇವರು ಎಲ್ಲರಿಗೂ ಒಳಿತನ್ನೇ ಬಯಸುವವರು. "ಓ ದೇವರೇ, ಈ ವರ್ಷ ಚೆನ್ನಾಗಿ ಮಳೆ ಬರಲಿ, ಬೆಳೆಗಳು ಚೆನ್ನಾಗಿ ಬರಲಿ" ಎಂದು ಪ್ರಾರ್ಥಿಸುತ್ತಿದ್ದರು. ಅಷ್ಟೇ ಅಲ್ಲ, ಎಲ್ಲಾ ಮನುಷ್ಯರೂ ಸಂತೋಷದಿಂದ ಪರಸ್ಪರ ಅನ್ಯೋನ್ಯವಾಗಿ ಬಾಳಲಿ, ಆರೋಗ್ಯವಂತರಾಗಿರಲಿ, ಅವರ ಮನಸ್ಸಿನಲ್ಲಿ ಸಂತೋಷ ತುಂಬಿರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಋಷಿಗಳು ಬರೆದ ಇಂತಹ ಅನೇಕ ಮಂತ್ರಗಳನ್ನು ನಾವು ಇಂದಿಗೂ ಪಠಿಸುತ್ತೇವೆ.



ಹೀಗೆ ಒಬ್ಬ ಋಷಿ ತನಗಾಗಿ ಏನನ್ನೂ ಬೇಡದೆ, ಕೇವಲ ಲೋಕಕಲ್ಯಾಣಾರ್ಥವಾಗಿ ಎಂದರೆ ಲೋಕದ ಜನರಿಗೆ, ಸಕಲ ಜೀವಿಗಳಿಗೆ ಒಳಿತಾಗಲಿ ಎಂದು ಬಯಸಿ ತಪಸ್ಸು ಮಾಡುತ್ತಿದ್ದ. ಇವನ ತಪಸ್ಸಿಗೆ ಮೆಚ್ಚಿ ಅನೇಕ ದೇವತೆಗಳು ಈ ಸಂನ್ಯಾಸಿಗೆ ವರಗಳನ್ನು ಕೊಡಲು ಬಂದರು. ವಾಯು, ಇಂದ್ರ, ಅಗ್ನಿ, ವರುಣ ಇವರೆಲ್ಲಾ ದೇವತೆಗಳು. ವಾಯು ಎಂದರೆ ಗಾಳಿಯ ದೇವತೆ, ಅಗ್ನಿ ಎಂದರೆ ಬೆಂಕಿಯ ದೇವತೆ, ವರುಣ ಎಂದರೆ ನೀರಿನ ದೇವತೆ, ಇಂದ್ರ ಎಂದರೆ ನಮ್ಮ ಇಂದ್ರಿಯಗಳನ್ನು ನಿಯಂತ್ರಿಸುವ ದೇವತೆ. ಹೀಗೆ ಈ ದೇವತೆಗಳು ಸಂನ್ಯಾಸಿಯ ಬಳಿಗೆ ಬಂದು, "ಋಷಿವರ್ಯ, ನಿನ್ನ ತಪಸ್ಸಿಗೆ ನಾವು ಮೆಚ್ಚಿದ್ದೇವೆ. ನಿನಗೆ ಬೇಕಾದ ವರವನ್ನು ಕೇಳಿಕೊ" ಎಂದರು. "ಆಕಾಶದಲ್ಲಿ ಹಾರಬೇಕೆ? ನೀರಿನಲ್ಲಿ ಮುಳುಗಿ ಗಂಟೆಗಟ್ಟಲೆ ಇರಬೇಕೆ? ಅಥವಾ ಏಕಾಏಕಿ ಅದೃಶ್ಯ

ನಾಗಬೇಕೆ? ಯಾವ ರೀತಿಯ ವರ ಕೇಳಿದರೂ ನಾವು ಕೊಡುತ್ತೇವೆ. ನಿನಗೆ ಸಾವಿರ ವರ್ಷ ಬದುಕುವ ಆಸೆ ಇದೆಯೆ? ನೀನು ದೀರ್ಘಾಯು ಆಗುವ ಹಾಗೆ ವರ ಕೊಡುತ್ತೇವೆ, ಕೇಳಿಕೊ" ಎಂದರು. ಆಗ ಋಷಿ ಕಣ್ಣು ಬಿಟ್ಟು ನೋಡುತ್ತಾನೆ. ದೇವಾಧಿದೇವತೆಗಳೇ ಇವನಿಗೆ ವರ ಕೊಡಲು ಪೈಪೋಟಿ ನಡೆಸುತ್ತಿದ್ದಾರೆ. ಋಷಿ ಶಾಂತನಾಗಿ ಉತ್ತರಿಸಿದ, "ದೇವತೆಗಳೇ, ನನಗೆ ಈ ಯಾವ ವರಗಳೂ ಬೇಕಾಗಿಲ್ಲ. ನಾನು ತಪಸ್ಸು ಮಾಡಿದ್ದು ಕೇವಲ ನನ್ನ ಮನಃಶಾಂತಿಗಾಗಿ ಹಾಗೂ ಲೋಕ ಕಲ್ಯಾಣಾರ್ಥವಾಗಿ. ನನಗೆ ಬೇಕೆನಿಸುವಂಥದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ."

ಆಗ ದೇವತೆಗಳು ಹೇಳಿದರು, "ಅಯ್ಯಾ, ನಿನ್ನಂತಹ ವಿಚಿತ್ರ ಸಂನ್ಯಾಸಿಯನ್ನು ನಾವು ಎಲ್ಲೂ ಕಂಡಿಲ್ಲ. ವರ ಕೊಡುತ್ತೇವೆಂದು ಮೇಲೆ ಬಿದ್ದು ಬಂದರೂ ಬೇಡ ಎನ್ನುತ್ತೀಯಲ್ಲ!" ಮತ್ತೆ ಹೇಳಿದರು, "ಹೋಗಲಿ, ಜನರಿಗೆ ನೀನು ಉಪಕಾರ ಮಾಡಬೇಕು ಎನ್ನುತ್ತೀಯಲ್ಲ; ನಿನಗೆ ರೋಗಗಳನ್ನು ಗುಣಪಡಿಸುವ ಶಕ್ತಿ ಕೊಡುತ್ತೇವೆ. ಅದನ್ನು ತೆಗೆದುಕೊಂಡು ಜನರಿಗೆ ಸಹಾಯ ಮಾಡು." ಆಗ ಸಂನ್ಯಾಸಿ ಕೇಳಿದ, "ದೇವತೆಗಳೇ, ನನಗೆ ಈ ಶಕ್ತಿಯ ಅಗತ್ಯವೂ ಇಲ್ಲ, ಏಕೆಂದರೆ ಪರಿಶುದ್ಧವಾದ ನೀರು, ಗಾಳಿ, ಆಹಾರಗಳಿಂದಲೇ ಸಾಕಷ್ಟು ರೋಗಗಳು ವಾಸಿಯಾಗುತ್ತವೆ. ಹೀಗಿರುವಾಗ ರೋಗ ವಾಸಿಮಾಡಲು ಪ್ರತ್ಯೇಕವಾದ ಶಕ್ತಿ ಏಕೆ? ಅಲ್ಲದೆ, ನೀವು ನನಗೆ ರೋಗ ವಾಸಿಮಾಡುವ ಶಕ್ತಿ ಕೊಡುತ್ತೀರೇ ವಿನಾ, ಸಾವನ್ನು ತಡೆಯುವ ಶಕ್ತಿಯನ್ನು ನೀಡಬಲ್ಲಿರಾ?" ದೇವತೆಗಳು ಹೇಳಿದರು "ಋಷಿವರ್ಯ, ಹುಟ್ಟಿದ ಜೀವಿಗಳೆಲ್ಲ ಸಾಯಲೇಬೇಕು. ಇದು ಪ್ರಕೃತಿಯ ನಿಯಮ. ಇದನ್ನು ಮೀರುವ ವರ ಕೊಡಲು ಸಾಧ್ಯವಿಲ್ಲ." ಆಗ ಋಷಿ ಹೇಳಿದ "ದೇವತೆಗಳೇ, ರೋಗಗಳೂ ಸಹ ಪ್ರಕೃತಿಯ ನಿಯಮ. ಕೆಲವೊಂದು ರೋಗಗಳು ಬರುತ್ತವೆ. ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕಿಂತ, ಎಲ್ಲರಿಗೂ ಒಳಿತಾಗಲಿ ಎಂದು ಪ್ರಾರ್ಥಿಸುತ್ತ, ಕಾಲ ಕಳೆಯುವುದು ಲೇಸಲ್ಲವೇ? ಆದ್ದರಿಂದ ನನಗೆ ನಿಮ್ಮ ವರ ಬೇಡ."

ದೇವತೆಗಳು ತಮ್ಮತಮ್ಮಲ್ಲೇ ಮಾತನಾಡಿಕೊಂಡರು. "ನಾವು ಅಷ್ಟು ದೂರದಿಂದ ಏನಾದರೂ ವರ ಕೊಡಬೇಕೆಂದು ಬಂದಿದ್ದೇವೆ, ಆದರೂ ಈ ಸಂನ್ಯಾಸಿ ನಿರಾಕರಿಸುತ್ತಾನಲ್ಲ!" ಕಡೆಗೆ ಎಲ್ಲ ದೇವತೆಗಳೂ ಸೇರಿ ಆ ಸಂನ್ಯಾಸಿಯ ನೆರಳಿಗೆ ಒಂದು ಶಕ್ತಿಯನ್ನು ಕೊಟ್ಟುಬಿಟ್ಟರು. ಆ ಸಂನ್ಯಾಸಿಯ ನೆರಳು ಬಿದ್ದಲ್ಲೆಲ್ಲ ಮನುಷ್ಯ, ಪ್ರಾಣಿ, ಪಕ್ಷಿಗಳ ಆರೋಗ್ಯ ಹೆಚ್ಚುತ್ತಿತ್ತು, ರೋಗಗಳು ಕಡಿಮೆಯಾಗುತ್ತಿತ್ತು. ಅಥವಾ ಗುಣವಾಗುತ್ತಿತ್ತು. ಅವನ ನೆರಳು ಬಿದ್ದಲ್ಲೆಲ್ಲಾ ಮರಗಿಡಗಳು ಹೂ-ಹಣ್ಣುಗಳನ್ನು ಚೆನ್ನಾಗಿ ಬಿಡುತ್ತಿದ್ದವು. ಬೆಳೆ ಚೆನ್ನಾಗಿ ಬರುತ್ತಿತ್ತು. ನಿಧಾನವಾಗಿ ಜನ ಸಂನ್ಯಾಸಿಯ ನೆರಳಿನ ಮಹಿಮೆಯನ್ನು ಗುರುತಿಸಿದರು. ಎಲ್ಲರೂ ಆ ಸಂನ್ಯಾಸಿಯನ್ನು 'ಒಳ್ಳೆಯ ನೆರಳಿನ ಸಂನ್ಯಾಸಿ' ಎಂದು ಕರೆಯ ತೊಡಗಿದರು. ಆ ಸಂನ್ಯಾಸಿಯ ಮೂಲ ಹೆಸರನ್ನು ಮರೆತೇಬಿಟ್ಟರು. ಆದರೆ ಸಂನ್ಯಾಸಿ ಮಾತ್ರ ಅದಾವುದನ್ನೂ ಗಮನಿಸದೆ ತನ್ನ ಪಾಡಿಗೆ ತಾನು ತಪಸ್ಸು ಮಾಡುತ್ತಿದ್ದನು.

## ಆಶ್ರಮದ ಕಾರ್ಯಕ್ರಮಗಳು

### ನವೆಂಬರ್ ೨೦೦೫

| | | |
|---|---|---|
| ಶ್ರೀ ಶ್ರೀ ಕಾಳೀ ಪೂಜಾ | ೦೧ | ಮಂಗಳವಾರ |
| ಏಕಾದಶಿ | ೧೨ | ಶನಿವಾರ |
| ಸ್ವಾಮಿ ಸುಬೋಧಾನಂದಜಿ ಜಯಂತಿ | ೧೩ | ಭಾನುವಾರ |
| ಸ್ವಾಮಿ ವಿಜ್ಞಾನಾನಂದಜಿ ಜಯಂತಿ | ೧೫ | ಮಂಗಳವಾರ |
| ಏಕಾದಶಿ | ೨೭ | ಭಾನುವಾರ |

ಆಶ್ರಮದ ಸಭಾಂಗಣದಲ್ಲಿ ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲೀಷಿನಲ್ಲಿಯೂ ಸಂಜೆ ೬ರಿಂದ ೭ರವರೆಗೆ ಪ್ರವಚನಗಳು ನಡೆಯುತ್ತವೆ.